C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.110/2021

ದಿನಾಂಕಃ 03.08.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:1 ಪಿ. ಡಬ್ಲ್ಯೂ:1

| | |
|---|---|
| ಸಾಕ್ಷಿದಾರರ ಹೆಸರು | ಅಫೀಜುಲ್ಲಾ |
| ತಂದೆಯ ಹೆಸರು | ಮಹಮ್ಮದ್ ಅಮೀರ್ |
| ವಯಸ್ಸು | 35 ವರ್ಷ |
| ಉದ್ಯೋಗ | Carpenter |
| ವಾಸ | ನಾಗಮಂಗಲ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಮತ್ತು 3 ನನ್ನ ಸ್ನೇಹಿತರು. ಚಾಸಾ.4 ಟೀ ಅಂಗಡಿಯವರು, ನಮ್ಮ ಊರಿನವರು. ಚಾಸಾ.5 ನನ್ನ ಅಣ್ಣ. ಚಾಸಾ.6 ಗೊತ್ತು , ಅವರು ನಮ್ಮ ಬೀದಿಯವರು. ಚಾಸಾ.7 ರಿಂದ 9 ಗೊತ್ತು. ಆರೋಪಿತರು ಗೊತ್ತು. ಆರೋಪಿತರು ನಾಗಮಂಗಲ ಊರಿನವರು. ಈಗ ನನಗೆ ತೋರಿಸಿದ ದೂರಿನಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ.1 , ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ದಿನಾಂಕ 06.08.2014 ರಂದು ಬೆಳಗ್ಗೆ 9.30 ಯಿಂದ 9.45 ಗಂಟೆ ಸಮಯದಲ್ಲಿ ನಾಗಮಂಗಲ - ಬೆಂಗಳೂರು ಮೇನ್ ರೋಡ್ ನಲ್ಲಿ ಚಾಸಾ.4 ರವರ ಟೀ ಅಂಗಡಿಯಲ್ಲಿ ನಾನು ಮತ್ತು ನನ್ನ ಸ್ನೇಹಿತರಾದ ಚಾಸಾ.2 ಮತ್ತು 3 ಟೀ ಕುಡಿಯುತ್ತಿದ್ದೆವು. ಆಗ ಈಗ ನ್ಯಾಯಾಲಯದ ಮುಂದೆ ಇರುವ 1 ರಿಂದ 3 ಆರೋಪಿತರು ಒಂದೇ ಬೈಕಿನಲ್ಲಿ ಟೀ ಕುಡಿಯುವ ಜಾಗಕ್ಕೆ ಬಂದರು. 1 ನೇ ಆರೋಪಿ , ಸುವರ್ ಕೇ ಬಚ್ಚೆ ಎಂದು ಬೈದು, ಎಲ್ಲಿ ನಿಮ್ಮ ಅಣ್ಣ ಎಂದು ಕೇಳಿದನು. ನಾನು ಗೊತ್ತಿಲ್ಲ ಎಂದು ಹೇಳಿದೆ. ಆಗ 1 ನೇ ಆರೋಪಿ ಇಮ್‌ದಾದ್, ಎ ಚೆನಾಲ್ ಕೇ ಬಚ್ಚೆಗೆ ಹೊಡೆದು ಸಾಯಿಸಿರೋ, ಮುಂದು ಏನ್

ಆಯ್ತುದೆ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದನು. ಆಗ 2 ನೇ ಆರೋಪಿಯಾದ ಸಾದಾತ್ ಖಾನ್ ಕೈಯಲ್ಲಿ ಒಂದು ಕಬ್ಬಿಣದ ರಾಡು ಇದ್ದು , 2 ನೇ ಆರೋಪಿ ಕಬ್ಬಿಣದ ರಾಡ್ ನಿಂದ ನನ್ನ ತಲೆಯ ಬಲ ಭಾಗಕ್ಕೆ ಹೊಡೆದನು. ನನಗೆ ತಲೆಗೆ ಗಾಯ ಆಗಿ ರಕ್ತ ಬಂದಿತ್ತು. ಆಗ 3 ನೇ ಆರೋಪಿ ನಿಶಾದ್ ಕಬ್ಬಿಣದ ರಾಡನ್ನು ಕಿತ್ತುಕೊಂಡು ನನ್ನ ಎಡಗೈಗೆ ಹೊಡೆದನು. ಚಾಸಾ.2 ಆಸೀಫ್ ಎಂಬುವರು, 3 ನೇ ಆರೋಪಿ ಕೈಯಿಂದ ರಾಡನ್ನು ಕಿತ್ತುಕೊಂಡರು. ಆಗ ಚಾಸಾ.3, ಆರೋಪಿಗಳಿಗೆ ಅವನಿಗೆ ಏನು ಗೊತ್ತಿಲ್ಲ, ಅವರು ಇರುವುದು ಬೇರೆ ಕಡೆ, ನೀವು ಇರುವುದು ಕಡೆ ಬೇರೆ ಕಡೆ ಅಂತ ಹೇಳಿ ಆರೋಪಿಗಳಿಗೆ ಸಮಾಧಾನ ಮಾಡಿದರು. ಚಾಸಾ.2 ಮತ್ತು 3, ನನ್ನನ್ನು ನಾಗಮಂಗಲ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿನ ವೈದ್ಯರು ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ಹೇಳಿದರು. ನನ್ನ ಅಣ್ಣ ಚಾಸಾ.5 ಬಂದು ಚುಂಚನಗಿರಿ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಆಸ್ಪತ್ರೆಯಲ್ಲಿ, X- ray ಅನ್ನು ತೆಗೆದು , ನಿಮಾನ್ಸ್ ಗೆ ಕರೆದುಕೊಂಡು ಹೋಗುವಂತೆ ಹೇಳಿದರು. ನಿಮಾನ್ಸ್ ಆಸ್ಪತ್ರೆಗೆ ಹೋಗಿ ಅದೇ ದಿವಸ ರಾತ್ರಿ ವಾಪಾಸ್ಸು ಚುಂಚನಗಿರಿ ಆಸ್ಪತ್ರೆಗೆ ಬಂದೆವು. ಚುಂಚನಗಿರಿ ಆಸ್ಪತ್ರೆಯಲ್ಲಿ 15 ದಿವಸ ಕಾಲ ಅಡ್ಮಿಟ್ ಆಗಿದ್ದೆನು. ಮಾರನೆಯ ದಿವಸ ಸಾಯಂಕಾಲ 4.00 ರಿಂದ 5.00 ಗಂಟೆ ಒಳಗೆ ಪೊಲೀಸರು ಆಸ್ಪತರಗೆ ಬಂದಿದ್ದರು. ಪೊಲೀಸರು ನನ್ನನ್ನು ವಿಚಾರಿಸಿದರು , ನಾನು ವೈದ್ಯರ ಮುಂದೆ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೆನು. ಪೂಲೀಸರು ನಾನು ಹೇಳಿದ್ದನ್ನು ಬರೆದುಕೊಂಡು, ನಂತರ ಅದನ್ನು ನನಗೆ ಓದಿ ಹೇಳಿದರು. ನಾನು ಸದರಿ ಬರವಣಿಗೆಗೆ ಸಹಿ ಮಾಡಿದ್ದೇನೆ. ನನ್ನನ್ನು ಸಾಯಿಸಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಆರೋಪಿಗಳು ಕಬ್ಬಿಣದ ರಾಡಿನಿಂದ ನನ್ನ ತಲೆಗೆ ಹಲ್ಲೆ ಮಾಡಿದರು.

ಆರೋಪಿಗಳು ಹಲ್ಲೆಗೆ ಉಪಯೋಗಿಸಿದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ರಾಡನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಆ ದಿನ ಘಟನೆ ಸಮಯದಲ್ಲಿ ನಾನು ಹಾಕಿಕೊಂಡಿದ್ದ ಬಟ್ಟೆಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ಯಾಂಟನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. ಘಟನೆಯಾದ 6-7 ದಿವಸಕ್ಕೆ ನಾನು ಆಸ್ಪತ್ರೆಯಲ್ಲಿ ಇದ್ದಾಗ, ಮು.ಮಾ.2 ಮತ್ತು 3 ಬಟ್ಟೆಗಳನ್ನು ನನ್ನ ಅಣ್ಣ ಚಾಸಾ.5 ರವರ ಮೂಲಕ ಪೊಲೀಸರಿಗೆ ಕೊಟ್ಟಿದ್ದೇನೆ.

<u>ಪಾಟೀ ಸವಾಲುಃ</u> ಆರೋಪಿಗಳ ಪರ ವಕೀಲರು , ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು, ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.